ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,**

**ವಾರ್ಡ್ ಕಛೇರಿಯಲ್ಲಿ ದಿನಾಂಕ: 17-04-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

| ಹಾಜರಿದ್ದವರು | ಗೈರುಹಾಜರು |
|---|---|
| 1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.<br>2. ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ವಾರ್ಡ್ ನಂ.194, ಗೊಟ್ಟಿಗೆರೆ.<br>3. ವೈದ್ಯಾಧಿಕಾರಿಗಳು, ಗೊಟ್ಟಿಗೆರೆ.<br>4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ.<br>5. ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ), ಗೊಟ್ಟಿಗೆರೆ<br>6. ವಾರ್ಡ ಸಹಾಯಕ ಅಭಿಯಂತರರು ವಾರ್ಡ್ ನಂ.194, ಗೊಟ್ಟಿಗೆರೆ.<br><br>ಸ್ಥಳೀಯ ಸಂಘ ಸದಸ್ಯರು:-<br>1. ಅಧ್ಯಕ್ಷರು, ಸೌತ್ ಅವೆನ್ಯೂ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>2. ಅಧ್ಯಕ್ಷರು, ಹಿಮಗಿರಿ ಮೆಡೋಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>3. ಅಧ್ಯಕ್ಷರು, ರಾಯಲ್ ಕೌಂಟಿ, 1ನೇ ಹಂತ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>4. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>5. ಅಧ್ಯಕ್ಷರು,ಪವಮಾನ ನಗರ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>6. ಅಧ್ಯಕ್ಷರು, ಸುರಭಿನಗರ<br>7. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ. | 1. ಸಂಚಾರಿ ಇನ್ಸ್‌ಪೆಕ್ಟರ್, ಗೊಟ್ಟಿಗೆರೆ.<br>2. ತೋಟಗಾರಿಕೆ ಇಲಾಖೆ<br>3. ಅಭಿಯಂತರು (ಬೃಹತ್ ರಸ್ತೆಗಳು) |

ದಿನಾಂಕ: 17-04-2021 ರಂದು ಮಧ್ಯಾಹ್ನ 03:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ರವರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿದರು.

1. **ಕೋವಿಡ್-19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಬಗ್ಗೆ.**

(i) ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಗೊಟ್ಟಿಗೆರೆ ರವರು ಮಾತನಾಡುತ್ತಾ ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚು ಕಂಡುಬರುತಿದ್ದು, ಅದರಲ್ಲೂ ಪ್ರಮುಖವಾಗಿ ಅಪಾರ್ಟ್‌ಮೆಂಟ್‌ಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪಾಡಲು ಕೋರಿದರು. 05 ಪ್ರಕರಣಗಳಿಗಿಂತ ಹೆಚ್ಚಿನ ಪ್ರಕರಣಗಳು ಬಂದಲ್ಲಿ Micro Containment Zone ಎಂದು ಘೋಷಣೆ ಮಾಡಿರುತ್ತೇವೆ ಎಂದು ತಿಳಿಸಿದರು.

(ii) ಅರ್ಹರಿರುವ ಸಾರ್ವಜನಿಕರು ಅಂ-ಘುಟಿ, ಆರೋಗ್ಯ ಸೇತು ಅಥವಾ ಸರ್ಕಾರಿ/ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡುವ ಮೂಲಕ ಲಸಿಕೆಯನ್ನು ಪಡೆಯಬಹುದಾಗಿದೆ ಎಂದು ಸಭೆಗೆ ತಿಳಿಸಿದರು ಹಾಗೂ ಕೋ-ವ್ಯಾಕ್ಸಿನ್ ಲಸಿಕೆಯನ್ನು ಲಭ್ಯಗೊಳಿಸಿರುವುದಾಗಿ ಮಾಹಿತಿ ಒದಗಿಸಿದರು.

2. **ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.**

ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಸಭೆಯಲ್ಲಿ ಮಾತನಾಡುತ್ತಾ, ಈಗಾಗಲೇ ರಾಯಲ್ ಕೌಂಟಿ ಬಡಾವಣೆ, ಹಿಮಗಿರಿ ಮೆಡೋಸ್, ಐ.ಡಿ.ಬಿ.ಐ ಬಡಾವಣೆಗಳಲ್ಲಿ ಸ್ಥಳಪರಿಶೀಲಿಸಿದ್ದು ಸಂಬಂಧಪಟ್ಟವರಿಂದ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

(I) ಅಧ್ಯಕ್ಷರು, ಪಾವಮಾನ ನಗರ ರವರು ತಮ್ಮ ಬಡಾವಣೆಯಲ್ಲಿ ದುರಸ್ತಿಗೊಂಡಿರುವ ಬೋರ್‌ವೆಲ್‌ಗಳ 03 ಸಂಖ್ಯೆ Control Panelಗಳು ಅನುಪಯುಕ್ತವಾಗಿದ್ದು, ಇವುಗಳಿಗೆ ಒದಗಿಸಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು

Scanned by CamScanner

ಕೋರಿರುತ್ತಾರೆ. ಮುಂದುವರೆದು, ಕೆಂಬತ್‌ಹಳ್ಳಿ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ನಾಲ್ಕು ಟ್ರಾನ್ಸ್‌ಫಾರ್ಮರ್‌ಗಳ ಬದಲು Single Pole ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.

(II) ಅಧ್ಯಕ್ಷರು, ಸೌತ್ ಅವಿನ್ಯೂ ಬಡಾವಣೆಯ ರವರು ತಮ್ಮ ಬಡಾವಣೆಯಲ್ಲಿ 2ನೇ ಕ್ರಾಸ್‌ನಲ್ಲಿರುವ ಕೇಬಲ್‌ಗಳು ದುರಸ್ತಿಗೊಂಡಿದ್ದು ಸರಿಪಡಿಸಲು ಕೋರಿರುತ್ತಾರೆ.

(III) ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ತಮ್ಮ ಬಡಾವಣೆಯಲ್ಲಿ ಪ್ಯಾನೆಲ್ ಮತ್ತು ಕೇಬಲಿಂಗ್ ಕಾಮಗಾರಿಯನ್ನು ಪೂರೈಸುವ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಸ್ಥಳ ಪರಿಶೀಲನೆ ನಡೆಸಿದ್ದು, ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ವಹಿಸಿ ಮುಂದಿನ ಸಭೆಗೆ ಹಾಜರಾಗಿ ವರದಿ ನೀಡುವುದು.

**3. ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಅನುಷ್ಠಾನಗೊಳ್ಳುತ್ತಿರುವ ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳ ಪ್ರಗತಿ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ.**

1. ಸೌತ್ ಅವಿನ್ಯೂ ಬಡವಾಣೆಯ 7ನೇ ಕ್ರಾಸ್‌ನಲ್ಲಿ ಒಳಚರಂಡಿ ನೀರು ಸರಾಗವಾಗಿ ಹರಿಯದೆ ಅಡಚಣೆ ಉಂಟಾಗುತ್ತಿರುವುದರಿಂದ, ಕೂಡಲೇ ದುರಸ್ತಿ ಪಡಿಸಲು ಕೋರಿರುತ್ತಾರೆ.
2. ಕೆಂಬತಹಳ್ಳಿ ಮುಖ್ಯರಸ್ತೆಯಲ್ಲಿ ಎರಡು ಮ್ಯಾನ್‌ಹೋಲ್ ಕವರ್‌ಗಳು ದುರಸ್ತಿಗೊಂಡಿದ್ದು, ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ಅಪಾಯ ಉಂಟಾಗುವ ಸಾಧ್ಯತೆ ಇದ್ದು ಕೂಡಲೇ ಸದರಿ ಮ್ಯಾನ್‌ಹೋಲ್ ಕವರ್‌ಗಳನ್ನು ದುರಸ್ತಿಗೊಳಿಸಲು ಕೋರಿರುತ್ತಾರೆ.
3. ಅಧ್ಯಕ್ಷರು ಹಿಮಗಿರಿ ಮೆಡೋಸ್ ರವರು ತಮ್ಮ ಬಡಾವಣೆಯಲ್ಲಿ ಕಳೆದ ಹತ್ತು ದಿನಗಳಿಂದ ಕಾವೇರಿ ನೀರು ಸರಬರಾಜು ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಮೆಟ್ರೋ ಕಾಮಗಾರಿಯಿಂದ ಪೈಪ್ ಮುರಿದು ಹೋಗಿದ್ದು, ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿದ್ದು, ದುರಸ್ತಿಗೊಳ್ಳುವವರೆಗೂ ಟ್ಯಾಂಕರ್ ವ್ಯವಸ್ಥೆ ಕಲ್ಪಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ನಿರ್ವಾಹಣಾ ಅಭಿಯಂತರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರು ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ವಹಿಸಿ ಮುಂದಿನ ಸಭೆಗೆ ಹಾಜರಾಗಿ ವರದಿ ನೀಡುವುದು.

**4. ರಸ್ತೆ, ಪಾದಚಾರಿ ಹಾಗೂ ಮಳೆ ನೀರು ಚರಂಡಿ ಕಾಮಗಾರಿ ಬಗ್ಗೆ.**

(1) ರಾಯಲ್ ಕೌಂಟಿ ಬಡಾವಣೆಯ ಪಾದಚಾರಿಯಲ್ಲಿರುವ ವ್ಯಾಪಾರಸ್ತರನ್ನು ತೆರವುಗೊಳಿಸಿರುವುದಾಗಿ ಆರೋಗ್ಯ ಪರಿವೀಕ್ಷಕರ ತಿಳಿಸಿದರು. ವಾರ್ಡ್ ವ್ಯಾಪ್ತಿಯಲ್ಲಿ ವ್ಯಾಪಾರ ಅಂಗಡಿಗಳು ಪಾದಚಾರಿಯಲ್ಲಿ ಮರುಕಳಿಸದಂತೆ ಆರೋಗ್ಯ ಪರಿವೀಕ್ಷಕರು ಹಾಗೂ ಸಂಚಾರಿ ಪೋಲೀಸ್ ರವರ ತಂಡವು ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

(2) ಹಿಮಗಿರಿ ಮೆಡೋಸ್ ಬಡಾವಣೆಯಲ್ಲಿ ಪಾಲಿಕೆಯು ಕಾಲುವೆ ಕಾಮಗಾರಿಯನ್ನು ಕೈಗೊಂಡಾಗ ರಸ್ತೆ ಬದಿಯಲ್ಲಿ ನಿರ್ಮಿಸಿರುವ ರ್‍ಯಾಂಪ್‌ಗಳನ್ನು ತಮ್ಮ ಅಸೋಷಿಯೇಷನ್ ವತಿಯಿಂದ ಕೈಗೊಂಡಿದ್ದು ಸದರಿ ಮೊತ್ತವನ್ನು ಮರುಪಾವತಿಸಲು ಅಧ್ಯಕ್ಷರು, ಹಿಮಗಿರಿ ಮೆಡೋಸ್ ಕೋರಿರುತಾರೆ. ಈ ಸಂಬಂಧ ವಾರ್ಡ ಅಭಿಯಂತರರು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(3) ಅಧ್ಯಕ್ಷರು, ಕ್ಲಾಸಿಕ್ ಆರ್ಚಿಡ್ಸ್ ಬಡಾವಣೆಯಲ್ಲಿ ಉಳಿದಿರುವ ಕೆಲ ರಸ್ತೆಗಳ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ. ಪಾಲಿಕೆಯ ಅಭಿಯಂತರರು ಪ್ರಸ್ತುತ ವರ್ಷದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

**5. ರಸ್ತೆಗಳಲ್ಲಿ ಉಬ್ಬು (Humps) ಗಳನ್ನು ನಿರ್ಮಿಸುವ ಬಗ್ಗೆ.**

(I) ರಾಯಲ್ ಕೌಂಟಿ ಬಡಾವಣೆಯ 80 ಅಡಿರಸ್ತೆ, 7ನೇ ಬ್ಲಾಕ್, 9ನೇ ಹಂತ, ಜೆ.ಪಿ.ನಗರ, ಶಂಕರ್‌ನಾಗ್ ರಸ್ತೆಗಳಲ್ಲಿ ಉಬ್ಬು ನಿರ್ಮಾಣ ಮಾಡಲು ಹಿಂದಿನ ಸಭೆಗಳಲ್ಲಿ ಸೂಚಿಸಿದ್ದು, ಈ ಸಂಬಂಧ ವಾರ್ಡ್ ಇಂಜಿನಿಯರ್ ರವರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಅಭಿಯಂತರರೊಂದಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

(II) ಶಂಕರ್‌ನಾಗ್ ರಸ್ತೆ ಹಾಗೂ ರಾಯಲ್ ಕೌಂಟಿ ಬಡಾವಣೆಯಲ್ಲಿ ನಿರ್ಮಿಸಿರುವ ಕೃಷ್ಣ ವಿಹಾರ ಹೋಟೆಲ್ ಎದುರು ಪಾರ್ಕಿಂಗ್ ವ್ಯವಸ್ಥೆಯ ಬಗ್ಗೆ ಸಂಚಾರಿ ಇನ್ಸ್‌ಪೆಕ್ಟರ್ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು, ಕೈಗೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಗೆ ಹಾಜರಾಗಿ ವರದಿ ಸಲ್ಲಿಸಲು ಸೂಚಿಸಲಾಯಿತು.

**6. ಘನತ್ಯಾಜ್ಯ ನಿರ್ವಹಣೆಯ ಬಗ್ಗೆ.**

Scanned by CamScanner

ಅಧ್ಯಕ್ಷರು, ಕ್ಲಾಸಿಕ್ ಆರ್ಚಿಡ್ಸ್‌ರವರು ಮಾತನಾಡುತ್ತಾ, ಹಲವಾರು ವರ್ಷಗಳಿಂದ ತಮ್ಮ ಬಡಾವಣೆಯಲ್ಲಿ ಸಂಗ್ರಹವಾಗುವ ಹಸಿ ಕಸವನ್ನು ಬಡಾವಣೆಯಲ್ಲಿಯೇ ಕಾಂಪೋಸ್ಟಿಂಗ್ ಮಾಡಲಾಗುತ್ತಿದ್ದು, ಕೇವಲ ಸಂಗ್ರಹವಾಗುವ ಒಣ ಕಸವನ್ನು ಪಾಲಿಕೆಗೆ ನೀಡುತ್ತಿರುವುದಾಗಿ ತಿಳಿಸಿದರು. ಜನವರಿ-2021ರ ಮಾಹೆಯಿಂದ ಕಾರ್ಯನಿರ್ವಹಿಸುತ್ತಿರುವ ಹೊಸ ಗುತ್ತಿಗೆದಾರರು ಸಂಗ್ರಹಿಸಿರುವ ಒಣ ಕಸವನ್ನು ಸಮರ್ಪಕವಾಗಿ ಸಂಗ್ರಹಿಸದೇ, ತಾವೇ ಖುದ್ದು ಮನೆಮನೆಗೆ ತೆರಳಿ ಒಣ ಕಸವನ್ನು ಸಂಗ್ರಹಿಸುವುದಾಗಿ ತಿಳಿಸಿರುತ್ತಾರೆ ಎಂದು ಅಧ್ಯಕ್ಷರು ತಿಳಿಸಿದರು. ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರು (ಘನತ್ಯಾಜ್ಯ ನಿರ್ವಹಣೆ) ರವರು ಸಮರ್ಪಕವಾಗಿ ಒಣ ಕಸವನ್ನು ಸಂಗ್ರಹಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲು ಸಭೆಯಲ್ಲಿ ತಿಳಿಸಲಾಯಿತು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯಗಳ ಬಗ್ಗೆ ಅಗತ್ಯ ಕ್ರಮ ವಹಿಸಿ ಮುಂದಿನ ಸಭೆಗೆ ಹಾಜರಾಗಿ ವರದಿ ಸಲ್ಲಿಸಲು ಸೂಚಿಸುತ್ತಾ ಸಭೆಯನ್ನು ಮುಕ್ತಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
21. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
23. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner